# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

### ಎಸ್.ಸಿ. ನಂ.04/2024

**ದೋ.ಸಾ. : 02 ಫ್ರಾ.ಸಾ. : 06**

| | | |
|---|---|---|
| ಸಾಕ್ಷಿಯ ಹೆಸರು | : | ನಾಗಪ್ಪ ಸುಬ್ರಾಯ ನಾಯ್ಕ |
| ತಂದೆಯ ಹೆಸರು | : | ಸುಬ್ರಾಯ ನಾಯ್ಕ |
| ವಯಸ್ಸು | : | 49 ವರ್ಷ |
| ಕೆಲಸ | : | ರೈತಾಪಿ |
| ವಾಸ | : | ಕಾಯ್ಕಿಣಿ, ತೆರ್ನಮಕ್ಕಿ, ಭಟ್ಕಳ |

**ದಿನಾಂಕಃ 16-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ದಿ. 18-10-2023 ರಂದು ಮುರ್ಡೇಶ್ವರ ಪೊಲೀಸರು ನನ್ನನ್ನು ಹಾಗೂ ಚಾಸಾ-3 ರವರನ್ನು ಠಾಣೆಗೆ ಕರೆಸಿದ್ದರು. ಅದರಂತೆ, ನಾನು ಹಾಗೂ ಚಾಸಾ-3 ರವರು ಸುಮಾರು ಬೆಳಿಗ್ಗೆ 8.00 ಗಂಟೆಗೆ ಠಾಣೆಗೆ ಹೋಗಿದ್ದು, ಅಲ್ಲಿ ಪೊಲೀಸರು ನಮಗೆ ಪಂಚನಾಮೆಗೆ ಬರುವಂತೆ ನೋಟಿಸ್ ನೀಡಿದ್ದರು. ಸದರಿ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಆನಂತರ ಪೊಲೀಸರು ಪೊಲೀಸ್ ಠಾಣೆಯಲ್ಲಿ ಪಂಚನಾಮೆ ಮಾಡಿ, ನಮ್ಮಿಂದ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಪೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ಸದರಿ ಪೋಟೋವನ್ನು ಠಾಣೆಯಲ್ಲಿ ತೆಗೆದಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-3 ಭಾಸ್ಕರ್ ಹಾಗೂ ಮತ್ತೊಬ್ಬ ವ್ಯಕ್ತಿ ಹಾಜರಿದ್ದೆವು. ಆದರೆ, ಆ ಸಮಯದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ.

2. ಸಾಕ್ಷಿಗೆ ತೋರಿಸಿದ ಬೆಳಿಗ್ಗೆ 10.15 ಗಂಟೆಗೆ ಮಾಡಿದ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು

ನಿಪಿ–18(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ತೋರಿಸಿದ ಫೋಟೊಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಫೋಟೊಗಳನ್ನು ನಕ್ಷತ್ರ ಹೋಟೆಲಿನ ಹತ್ತಿರ ಇರುವ ರೈಲ್ವೆ ಟ್ರ್ಯಾಕ್ ಬಳಿ ತೆಗೆದ ಫೋಟೊಗಳು ಎಂದು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–19 ಮತ್ತು 20 ಎಂದು ಗುರುತಿಸಲಾಯಿತು. ಸದರಿ ನಿಪಿ–19 ಮತ್ತು 20 ಫೋಟೊದಲ್ಲಿ ಕಾಣುತ್ತಿರುವ ವ್ಯಕ್ತಿಯು ಬನಿಯಾನ್ ಮತ್ತು ಕತ್ತಿಯನ್ನು ಹಾಜರುಪಡಿಸಿದ್ದು, ಪೊಲೀಸರು ಅವುಗಳನ್ನು ಜಪ್ತುಪಡಿಸಿಕೊಡಿರುತ್ತಾರೆ. ಯಾವ ಕಾಣಕ್ಕಾಗಿ ಸದರಿ ವಸ್ತುಗಳನ್ನು ಆರೋಪಿಯು ಹಾಜರುಪಡಿಸಿರುತ್ತಾನೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಪಂಚನಾಮೆಯ ವೇಳೆ ಪೊಲೀಸರು ತಯಾರಿಸಿದ ನಕಾಶೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–21 ಎಂದು, ಅದರಲ್ಲಿರುವ ಸಹಿಯನ್ನು ನಿಪಿ–21(ಎ) ಎಂದು ಗುರುತಿಸಲಾಯಿತು.

3. ಸದರಿ ಪಂಚನಾಮೆಯ ವೇಳೆ ಜಪ್ತುಪಡಿಸಿಕೊಂಡ ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ.–1 ಎಂದು, ಅದರ ಮೇಲಿರುವ ಬಟ್ಟೆಯ ಚೀಲವನ್ನು ಎಂ.ಓ.–1/1 ಎಂದು, ಅದಕ್ಕೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ.–1/1(ಎ) ಎಂದು ಗುರುತಿಸಲಾಯಿತು. **(ಈ ಹಂತದಲ್ಲಿ ಪಿ.ಪಿ. ರವರು ಒಂದು ಸೀಲಾದ ವಸ್ತುವನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲು ಅನುಮತಿ ಕೋರಿದ್ದು, ಸದರಿ ವಸ್ತುವಿನ ಮೇಲೆ ಇದ್ದ ಸೀಲು ಸುಸ್ಥಿತಿಯಲ್ಲಿ ಇರುವುದನ್ನು ಗಮನಿಸಿ, ಪಿ.ಪಿ. ರವರಿಗೆ ಅದನ್ನು ತೆರೆಯಲು ಅನುಮತಿಸಲಾಯಿತು.)** ಅದೇ ರೀತಿ ಸಾಕ್ಷಿಯು ಪಂಚನಾಮೆಯ ವೇಳೆ ಜಪ್ತುಪಡಿಸಿಕೊಂಡ ಒಂದು ಬಿಳಿ ಬನಿಯಾನ್ ನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಎಂ.ಓ.–2 ಎಂದು, ಅದರ ಮೇಲಿರುವ ಬಟ್ಟೆಯ ಚೀಲವನ್ನು ಎಂ.ಓ.–2/1 ಎಂದು, ಅದಕ್ಕೆ ಅಂಟಿಸಿರುವ ಚೀಟಿಯ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ.–2/1(ಎ) ಎಂದು ಗುರುತಿಸಲಾಯಿತು.

4. ಆನಂತರ ಪೊಲೀಸರು ನಮ್ಮನ್ನು ಚಾಸಾ–1 ರಾಮದಾಸ ರವರ ಮನೆಯ ಬಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಶವ ಬಿದ್ದ ಸ್ಥಳವನ್ನು ತೋರಿಸಿ, ಪಂಚನಾಮೆ ಮತ್ತು ನಕಾಶೆಯನ್ನು ಮಾಡಿರುತ್ತಾರೆ ಹಾಗೂ ಫೋಟೊ ತೆಗೆದಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ–3 ಭಾಸ್ಕರ ಮತ್ತು ಇನ್ನೊಬ್ಬ ವ್ಯಕ್ತಿ ಇದ್ದು, ಅಲ್ಲಿ ಪಂಚನಾಮೆಗೆ ಮತ್ತು ನಕಾಶೆಗೆ ನಮ್ಮ ಸಹಿಯನ್ನು ಪಡೆದುಕೊಂಡರು. ಸದರಿ ಪಂಚನಾಮೆ ಮತ್ತು ನಕಾಶೆಯನ್ನು ಸಾಕ್ಷಿಯು ನೋಡಿ

ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–22 ಎಂದು, ಸಾಕ್ಷಿಯ ಸಹಿಯನ್ನು ನಿಪಿ–22(ಎ) ಎಂದು, ನಕಾಶೆಯನ್ನು ನಿಪಿ–23 ಎಂದು, ಸಾಕ್ಷಿಯ ಸಹಿಯನ್ನು ನಿಪಿ–23(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೊವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–24 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಇದ್ದ ವ್ಯಕ್ತಿಯು ರಾಮದಾಸ ರವರ ಮನೆಯಲ್ಲಿ ಬಾಡಿಗೆಗೆ ಇದ್ದುದ್ದನ್ನು ತೋರಿಸಿರುತ್ತಾರೆ.

5. ಈಗ ವಿ.ಸಿ.ಯಲ್ಲಿ ಕಾಣುತ್ತಿರುವ ವ್ಯಕ್ತಿಯು ಬಾಡಿಗೆಗೆ ಇದ್ದ ಮನೆಯಿಂದ 10 ಅಡಿ ದೂರದಲ್ಲಿ ಆತನ ಹೆಂಡತಿಯ ಶವ ಬಿದ್ದಿದ್ದು, ಶವದ ಮೈಮೇಲೆ ಇದ್ದ ಒಂದು ಮೊಬೈಲನ್ನು ಪೊಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ನಿಪಿ–7 ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–7(ಬಿ) ಎಂದು ಗುರುತಿಸಲಾಯಿತು. ಮೃತಳ ಶವ ಬಿದ್ದ ಸ್ಥಳದಲ್ಲಿ ಪೊಲೀಸರು ಫೋಟೊ ತೆಗೆದಿರುತ್ತಾರೆ. ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮೊಬೈಲ್ ಎಫ್.ಎಸ್.ಎಲ್. ನಿಂದ ಬಂದಿರುವುದಿಲ್ಲ ಎಂದು ಹೇಳಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.